ಕ್ರ.ಸಂ.ಆ.ವಿ.ಸಿ.ಆರ್: 131 07/08

ಪುರಸಭಾ ಕಾರ್ಯಾಲಯ
ಪುತ್ತೂರು ದಿ: 15-11-07.

ಸಹಾಯಕ ಸಾರಿಗೆ ಅಧಿಕಾರಿ,
ಸಾರಿಗೆ ಇಲಾಖೆ,
ಪುತ್ತೂರು.

ಮಾನ್ಯರೇ,

ವಿಷಯ: ಪುತ್ತೂರು ಪುರಸಭೆಯ ವ್ಯಾಪ್ತಿಯ ರಸ್ತೆ ಬದಿಗಳಲ್ಲಿ ರಿಕ್ಷಾ ಟೆಂಪೋ ಸಂಖ್ಯೆ ಸಿ.ಎನ್.ಬಿ.9664ರಲ್ಲಿ ಹಸಿಮೀನು ಮಾರಾಟ ಮಾಡುತ್ತಿರುವುದರಿಂದ ಆಗುತ್ತಿರುವ ತೊಂದರೆ ಬಗ್ಗೆ.

ಪುತ್ತೂರು ಪುರಸಭೆಯ ವ್ಯಾಪ್ತಿಯ ರಸ್ತೆಬದಿಗಳಲ್ಲಿ ರಿಕ್ಷಾ ಟೆಂಪೋ ಸಂಖ್ಯೆ ಸಿ.ಎನ್.ಬಿ.9664ರಲ್ಲಿ ವಾಹನ ಸಂಚಾರಕ್ಕೆ ಸಾರ್ವಜನಿಕರಿಗೆ ತೊಂದರೆಯಾಗದಂತೆ ಈ ಕಛೇರಿ ಯಾವುದೇ ಅನುಮತಿ ಪಡೆಯದೆ ಅನಧಿಕೃತವಾಗಿ ಹಸಿಮೀನು ಮಾರಾಟ ಮಾಡುತ್ತಿರುವುದು ಕಂಡುಬಂದಿರುತ್ತದೆ. ಈ ಬಗ್ಗೆ ಪರಿಶೀಲಿಸಿ ಪುರಸಭೆಯ ವತಿಯಿಂದ ಕ್ರಮ ಕೈಗೊಂಡು ಪಲವು ಬಾರಿ ಸದ್ರಿ ವಾಹನದ ವ್ಯಾಪಾರಸ್ತರಿಗೆ ದಂಡ ವಿಧಿಸಲಾಗಿರುತ್ತದೆ. ಆದಗ್ಯೂ ಸದ್ರಿ ವಾಹನದಲ್ಲಿ ರಸ್ತೆ ಬದಿಗಳಲ್ಲಿ ಹಸಿಮೀನು ಮಾರಾಟವನ್ನು ಮುಂದುವರಿಸುತ್ತಿದ್ದು ಈ ಬಗ್ಗೆ ತಮ್ಮ ಇಲಾಖೆಯಿಂದ ಪರಿಶೀಲಿಸಿ ರಿಕ್ಷಾ ಟೆಂಪೋ ಸಂಖ್ಯೆ ಸಿ.ಎನ್.ಬಿ.9664ರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ಕೋರಲಾಗಿದೆ.

ಪುರಸಭಾ ಮುಖ್ಯ ರಸ್ತೆಗಳಲ್ಲಿ ಬೇರೆ ಕೆಲವು ವಾಹನಗಳಲ್ಲಿಯೂ ಅನಧಿಕೃತವಾಗಿ ಹಸಿಮೀನು ಮಾರಾಟ ಮಾಡುತ್ತಿರುವುದರಿಂದ ವಾಹನ ಸಂಚಾರಕ್ಕೆ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು ಪರಿಸರವೂ ಮಾಲಿನ್ಯವಾಗುತ್ತಿರುವುದರಿಂದ ಅಂತಹ ವಾಹನಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ಕೋರಲಾಗಿದೆ.

ತಮ್ಮ ನಂಬುಗೆಯ,
ಸಹಿ/-
ಮುಖ್ಯಾಧಿಕಾರಿ
ಪುರಸಭೆ, ಪುತ್ತೂರು.

ಪ್ರತಿ:

1. ಠಾಣಾಧಿಕಾರಿ, ನಗರ ಪೋಲೀಸ್‌ಠಾಣೆ ಪುತ್ತೂರು ಇವರಿಗೆ ಸಲ್ಲಿಸುತ್ತಾ ವಿಷಯಕ್ಕೆ ಸಂಬಂದಿಸಿದಂತೆ ತಮ್ಮ ಇಲಾಖಾ ವತಿಯಿಂದ ಅವಶ್ಯ ಕ್ರಮ ಕೈಗೊಳ್ಳಬೇಕಾಗಿ ಕೋರಲಾಗಿದೆ.
2. ಆಡಳಿತಾಧಿಕಾರಿಗಳು ಪುರಸಭೆ ಪುತ್ತೂರು ಹಾಗೂ ಸಹಾಯಕ ಕಮಿಷನರರು ಉಪವಿಭಾಗ ಪುತ್ತೂರು ಇವರ ಅವಗಾಹನೆಗೆ ಸಲ್ಲಿಸಲಾಗಿದೆ.

ಮುಖ್ಯಾಧಿಕಾರಿ
ಪುರಸಭೆ, ಪುತ್ತೂರು.